ಓ.ಎಸ್. ನಂ. : 12-2020

ಪಿ.ಡಬ್ಲ್ಯೂ : 2

ಸಾಕ್ಷಿಯ ಹೆಸರುಃ ಶ್ರೀಮತಿ ನಮಿತಾ ಆನಂದು ಉಳಗೇಕರ

ದಿಃ 26-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಆರ್ ಎಸ್ ಎಚ್ (ಜಿ) ವಕೀಲರಿಂದಃ ಪ್ರತಿವಾದಿ ಪರವಾಗಿಃ**

ಕೋಯರ್ ರವರಿಗೆ ಸುಬ್ಬಾ ಎನ್ನುವ ಸಹೋದರ ಇದ್ದ ಎನ್ನುವ ಪ್ರಶ್ನೆಗೆ ನನಗೆ ಗೊತ್ತಿಲ್ಲ ಅಂತಾ ನುಡಿಯುತ್ತಾರೆ. ಕೋಯರ್ ರವರ ಮಗ ಸೈರೋಬಾ ಎಂದರೆ ನನಗೆ ಗೊತ್ತಿಲ್ಲ. ಸೈರೋಬನ ಮಗ ಪ್ರತಿವಾದಿ ವಿಜಯ ಎಂದರೆ ಗೊತ್ತಿಲ್ಲ. ಸೈರೋಬಾ ಮತ್ತು ಪುಂಡಲೀಕ ತಮ್ಮ ಒಟ್ಟೂ ಜಮೀನುಗಳನ್ನು ತಮ್ಮ ಜೀವಿತ ಕಾಲದಲ್ಲಿ ರೈತಾಪಿ ನಾತೆಯಿಂದ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ಸದರಿ ಜಮೀನುಗಳು ಗೇಣಿ ಜಮೀನುಗಳು ಎಂದರೆ ಸರಿ. ಸದರಿಯವರು ನ್ಯಾಯಮಂಡಳಿಯ ಮುಂದೆ ಬೇರೆ ಬೇರೆಯಾಗಿ ಫಾರ್ಮ ಗಳನ್ನು ಭರ್ತಿ ಮಾಡಿ ಖಾತೆ ಮಾಡಿಕೊಂಡಿದ್ದು ಇರುತ್ತದೆ. ಟ್ರಿಬುನಲ್ ನಲ್ಲಿ ಆದೇಶವಾಗುವ ಪೂರ್ವದಲ್ಲಿ ಅವರಿಬ್ಬರ ಹೆಸರುಗಳು ಕಂದಾಯ ದಾಖಲಾತಿಯಲ್ಲಿ ಸಾಮೂಹಿಕವಾಗಿ ಇದ್ದವು ಎನ್ನುವ ಪ್ರಶ್ನೆಗೆ ಇರಬಹುದು ಎಂದು ನುಡಿಯುತ್ತಾರೆ.

ಕೊಳಗೆ ಗ್ರಾಮದ ಎಂ ಇ ನಂ.3076 ರ ಅನ್ವಯ ದಾವಾ ಜಮೀನುಗಳು ಟ್ರಿಬುನಲ್ ಮೂಲಕ ಪುಂಡಲೀಕ ಇವರಿಗೆ ಬಂದಿದ್ದು ಇರುತ್ತದೆ ಎಂದರೆ ಸರಿ. ಹೊಸಾಳಿ ಗ್ರಾಮದ ಎಂ ಇ ನಂ.2821 ಅನ್ವಯ ಹೊಸಾಳಿಯ ದಾವಾ ಜಮೀನುಗಳು ಪುಂಡಲೀಕರವರ ಹೆಸರಿಗೆ ಖಾತೆಯಾಗಿತ್ತು ಎಂದರೆ ಸರಿ. ಪುಂಡಲೀಕರವರು ದಿಃ17-10-1998 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ 2014 ರಲ್ಲಿ ತೀರಿಕೊಂಡಿರುತ್ತಾರೆ. ದೇವಕಿ ಇವರು 2018 ರಲ್ಲಿ ತೀರಿಕೊಂಡಿದ್ದು ಇರುತ್ತದೆ. ಲಲಿತಾ ರವರು ಸೆಪ್ಟೆಂಬರ್ 2018 ರಲ್ಲಿ ತೀರಿಕೊಂಡಿರುತ್ತಾರೆ. ಪುಂಡಲೀಕರವರು ತೀರಿಕೊಂಡ ನಂತರ ಅವರ ಜೀವಂತ ಇರುವ ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲಿ ವಾರಸಾ ಮಾಡಿದ್ದು ಇರುತ್ತದೆ. ದೇವಕಿ ತೀರಿಕೊಂಡಾಗ ಲಲಿತಾ ಒಬ್ಬಳೇ ಮಗಳು. ಲಲಿತಾಳ ಹೆಸರಿನಲ್ಲಿ ಖಾತೆ ಮಾಡಿದ್ದು ಇರುತ್ತದೆ. ಲಲಿತಾ ದಾವಾ ಮನೆಯಲ್ಲಿ ವಾಸವಾಗಿದ್ದಳು ಎಂದರೆ ಸರಿ. ಪ್ರತಿವಾದಿಯು ಮತ್ತೊಂದು ಭಾಗದಲ್ಲಿ ವಾಸವಾಗಿದ್ದರು ಎಂದರೆ ಸರಿ. ಲಲಿತಾ ರವರಿಗೆ ತೊಂದರೆಯಾದಾಗ ಪ್ರತಿವಾದಿ ನೋಡಿಕೊಳ್ಳುತ್ತಿದ್ದನು ಎಂದರೆ ಸರಿಯಲ್ಲ, ದಾವಾ ಜಮೀನಿನ ಸಾಗುವಳಿಗೆ ಪ್ರತಿವಾದಿ ಸಹಾಯ ಮಾಡುತ್ತಿದ್ದನು ಎಂದರೆ ಸರಿಯಲ್ಲ. ಈ ಕಾರಣದಿಂದ ಲಲಿತಾರವರು ಪ್ರತಿವಾದಿಗೆ ತಮ್ಮ ಜಮೀನುಗಳನ್ನು ಮೃತ್ಯುಪತ್ರ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಓ.ಎಸ್. ನಂ. : 12–2020

ಪಿ.ಡಬ್ಲ್ಯೂ : 2

ಪ್ರತಿವಾದಿಯು ಲಲಿತಾರವರಿಗೆ ಅತೀ ಹತ್ತಿರದ ನೇರ ವಾರಸಾದ ಸಂಬಂಧಿಕನು ಇರುತ್ತಾನೆ ಎಂದರೆ ಸರಿಯಲ್ಲ. ಕೊಯರ್ ರವರಿಗೆ ದೇವಕಿ ಎನ್ನುವ ಮಗಳು ಇದ್ದಳು ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲ ದಾವಾ ಆಸ್ತಿಗಳು ಪುಂಡಲೀಕ ಸ್ವಯಾರ್ಜಿತವಾಗಿ ಗಳಿಸಿಕೊಂಡು ಸಾಗುವಳಿ ಮಾಡುತ್ತಿದ್ದನು ಎಂದರೆ ಸರಿಯಲ್ಲ. ಕೋಯರ್ ನಿಂದ ಪುಂಡಲೀಕ ಈತನಿಗೆ ಯಾವುದೇ ಜಮೀನುಗಳು ಬಂದಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಸೈರೋಬಾ ಮತ್ತು ಪುಂಡಲೀಕರ ವರು ಸಾಮೂಹಿಕವಾಗಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ನನ್ನ ಅಜ್ಜಿ ದೇವಕಿ ಮತ್ತು ಅವರ ಕುಟುಂಬಕ್ಕೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಹತ್ತಿರದ ವಾರಸುದಾರರಾಗಿ ಮತ್ತು ಮೃತ್ಯು ಪತ್ರದ ಅನ್ವಯ ಪ್ರತಿವಾದಿ ಮಾತ್ರ ದಾವಾ ಆಸ್ತಿಗೆ ಹಕ್ಕುದಾರನು ಇರುತ್ತಾನೆ ಎಂದರೆ ಸರಿಯಲ್ಲ. ಪುಂಡಲೀಕ, ದೇವಕಿ ಮತ್ತು ಲಲಿತಾರವರು ತೀರಿಕೊಂಡ ನಂತರದ ಮ್ಯುಟೇಶನ್ ಎಂಟ್ರಿಗಳನ್ನು ಪ್ರಶ್ನೆ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಈ ಕುರಿತು ಕಂದಾಯ ಇಲಾಖೆಯಲ್ಲಿ ಮೇಲ್ಮನವಿ ಸಲ್ಲಿಸಿದ್ದು ಇರುವುದಿಲ್ಲ. ದಾವಾ ಜಮೀನುಗಳಿಗೆ ನಾವು ಸಹ ಹಕ್ಕುದಾರರು ಅಂತಾ ಕಂದಾಯ ಇಲಾಖೆ ಮುಂದೆ ಅರ್ಜಿ ಸಲ್ಲಿಸಿದ್ದು ಇರುವುದಿಲ್ಲ, ದಾವಾ ಆಸ್ತಿಗಳಲ್ಲಿ ಪ್ರತಿವಾದಿ ಮಾತ್ರ ಕಬ್ಜಾ ವಹಿವಾಟಿಯಲ್ಲಿ ಇರುತ್ತಾನೆ, ನಾವುಗಳು ಯಾವುದೇ ದಿನದಿಂದ ಕಬ್ಜಾದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಕಾರವಾರ.